**ಓಎಸ್ ನಂಃ 09/2017** **ಪಿಡಬ್ಲೂಃ 01**

**<u>ಸಾಕ್ಷಿಗೆ ದಿನಾಂಕ 16-02-2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ಶ್ರೀ.ವಿ.ಜೆ.ಎಂ. ವಕೀಲರಿಂದ</u>**

ನಾನು ದಿಃ 07-05-1976 ರ ಉರ್ದು ಭಾಷೆಯಲ್ಲಿರುವ ಖರೀದಿ ಪತ್ರವನ್ನು ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸದರಿ ಖರೀದಿ ಪತ್ರದ ಭಾಷಾಂತರಗೊಳಿಸಿದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ಭಾಷಾಂತರಕಾರರ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 (ಬಿ) ಎಂದು ಗುರುತಿಸಲಾಯಿತು.

ದಿಃ 07-02-1992 ರ ಖರೀದಿ ಪತ್ರದ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ದಿಃ 29-06-2016 ರ ಅಧಿಕೃತ ಜ್ಞಾಪನ ಪತ್ರದ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಒಂದು ಮುಟೇಷನ ರಿಜಿಸ್ಟರ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಸರ್ವೆ ನಂಃ 251 ರ 2007-08 ನೇ ಇಸ್ವಿಯ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಸದರಿ ಸರ್ವೆ ನಂಬರನ 2008-09 ನೇ ಇಸ್ವಿಯ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಸದರಿ ಸರ್ವೆ ನಂಬರನ 2016-17 ನೇ ಇಸ್ವಿಯ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ಇನ್ನೊಂದು ಸರ್ವೆ ನಂಃ 251 ಕ್ಕೆ ಸಂಬಂಧಿಸಿದ 2016-17 ನೇ ಇಸ್ವಿಯ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ಸರ್ವೆ ನಂಃ 251 ಕ್ಕೆ ಸಂಬಂಧಿಸಿದ 1998-99 ನೇ ಇಸ್ವಿಯ ಪಹಣಿ ಪತ್ರಿಕೆಯ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ದಿಃ 10-01-2020 ರ ಕಾನೂನು ಬದ್ಧ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು. ಸದರಿ ನೋಟಿಸಿಗೆ ಸಂಬಂಧಿಸಿದಂತೆ ಅಂಚೆ ಇಲಾಖೆಯವರು ನೀಡಿದ ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಯಿತು.

**ಆದ್ದರಿಂದ ದಾವೆಯಲ್ಲಿ ಕೇಳಿರುವಂತೆ ಪರಿಹಾರ ನೀಡಲು ಕೋರಿಕೊಳ್ಳುತ್ತೇನೆ.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಎ.ಜಿ.ಪಿ.ರವರಿಂದ**

ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು,ಸಮಯ ನೀಡಲಾಯಿತು (ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.